2) ಹಾಗಿದ್ದಲ್ಲಿ ಯಾವುದಾದರೂ ಪ್ರಕರಣದಲ್ಲಿ: ಶಿಕ್ಷೆಯಾಗಿದೆಯೇ?

1) ಜೈಲು ಶಿಕ್ಷೆ

2) ದಂಡ

ಶ್ರೀ ಬಸವರಾಜ್ ಶಿವಣ್ಣನವರ್ (ಪರಿಸರ, ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಅಸಂಪ್ರದಾಯಿಕ ಇಂಧನ ರಾಜ್ಯ ಸಚಿವರು):

1) ಪರಿಸರ ಮಾಲಿನ್ಯದ ಕಾನೂನಿನ ಉಲ್ಲಂಘನೆ ಬಗ್ಗೆ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿರುವ ಒಟ್ಟು ಪ್ರಕರಣ ಸಂಖ್ಯೆ: 157.

ಅ) ಜಲ ಮಾಲಿನ್ಯ ನಿಯಂತ್ರಣ ಕಾಯಿದೆಯ ಅಡಿಯಲ್ಲಿ ಹೂಡಲಾದ ಪ್ರಕರಣಗಳ ಸಂಖ್ಯೆ: 107

ಆ) ವಾಯುಮಾಲಿನ್ಯ ನಿಯಂತ್ರಣ ಕಾಯಿದೆಯ ಅಡಿಯಲ್ಲಿ ಹೂಡಲಾದ ಒಟ್ಟು ಪ್ರಕರಣಗಳ ಸಂಖ್ಯೆ: 50

2) ಹೌದು

ಇಲ್ಲ.

ಅ) ಮಾನ್ಯ ಸಿ. ಎಂ. ಎಂ. ನ್ಯಾಯಾಲಯ, ಬೆಂಗಳೂರಿನಲ್ಲಿ ಲೈಮ್ ಕಿಲ್ನ, ಬೆಂಗಳೂರು ಇದರ ವಿರುದ್ಧ ಹೂಡಲಾದ ಸಿ.ಸಿ. ಸಂಖ್ಯೆ: 2022-92 ರ ಪ್ರಕರಣದಲ್ಲಿ ದಿನಾಂಕ: 12.2.93 ರ ಪ್ರಕರಣದಲ್ಲಿ ದಿನಾಂಕ: 12-2-93 ರಂದು ಹೊರಡಿಸಿದ ಆದೇಶದಲ್ಲಿ ಶಿಕ್ಷೆಯಾಗಿದ್ದು ಮಾನ್ಯ ನ್ಯಾಯಾಲಯವು ಅಪರಾಧಿಗೆ ರೂ. 1000.00 ದಂಡವನ್ನು ವಿಧಿಸಿರುತ್ತದೆ.

ಆ) ಮಾನ್ಯ ಜೆ. ಎಂ. ಎಫ್.ಸಿ. ನ್ಯಾಯಾಲಯದಲ್ಲಿ (ಕೊಪ್ಪಳ) ಮುನಿರಾಬಾದ್ ಕೆಮಿಕಲ್ಸ್ ಕಂ. ಇದರ ವಿರುದ್ಧ ಹೂಡಲಾಗಿರುವ ಕ್ರಿಮಿನಲ್ ಪ್ರಕರಣದ ಸಂಖ್ಯೆ: ಸಿ.ಸಿ. 117-89 ಕ್ಕೆ ದಿನಾಂಕ 30. 12. 93 ರಲ್ಲಿ ಶಿಕ್ಷೆಯಾಗಿ ಆರೋಪಿಗೆ ರೂ. 1000.00 ದಂಡವನ್ನು ವಿಧಿಸಲಾಗಿದೆ.

**ರಾಜ್ಯದಲ್ಲಿ ಸ್ವಂತ ಕಟ್ಟಡಗಳಿಲ್ಲದಿರುವ ಆಸ್ಪತ್ರೆಗಳು**

433 (667) ಶ್ರೀ ಎಸ್. ಪಿ. ಮುದ್ದು ಹನುಮೇಗೌಡ (ಕುಣಿಗಲ್): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ರಾಜ್ಯದಲ್ಲಿ ಸ್ವಂತ ಕಟ್ಟಡಗಳಿಲ್ಲದೆ ಇರುವ ಆಸ್ಪತ್ರೆಗಳು ಎಷ್ಟು?

2) ತುಮಕೂರು ಜಿಲ್ಲಾ ಹಾಗೂ ಕುಣಿಗಲ್ ವಿಧಾನಸಭಾ ಕ್ಷೇತ್ರದಲ್ಲಿ ಈ ಸಂಖ್ಯೆ ಎಷ್ಟು?

3) ಈ ಸಮಸ್ಯೆಯ ಪರಿಹಾರಕ್ಕೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ?

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

| | | | |
|---|---|---|---|
| 1) | ಅ) ಪ್ರಾಥಮಿಕ ಆರೋಗ್ಯ ಕೇಂದ್ರ | - | 499 |
| | ಆ) ಸಮುದಾಯ ಆರೋಗ್ಯ ಕೇಂದ್ರ | - | 71 |
| | ಇ) ಉಪ ಕೇಂದ್ರ | - | 2660 |

ಗಳು ಸ್ವಂತ ಕಟ್ಟಡವನ್ನು ಹೊಂದಿರುವುದಿಲ್ಲ

2) ತುಮಕೂರು ಜಿಲ್ಲೆಯಲ್ಲಿ;

| | | | |
|---|---|---|---|
| | 1) ಪ್ರಾಥಮಿಕ ಆರೋಗ್ಯ ಕೇಂದ್ರಗಳು | - | 21 |
| | 2) ಸಮುದಾಯ ಆರೋಗ್ಯ ಕೇಂದ್ರಗಳು | - | 3 |
| | 3) ಉಪ ಕೇಂದ್ರಗಳು | - | 250 |

ಹಾಗೂ ಕುಣಿಗಲ್ ವಿಧಾನ ಸಭಾ ಕ್ಷೇತ್ರದಲ್ಲಿ 5 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಕಟ್ಟಡ ಇರುವುದಿಲ್ಲ.

3) ತುಮಕೂರು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಹೊಸ ಕಟ್ಟಡ ನಿರ್ಮಾಣ ಕಾಮಗಾರಿ ಕೈಗೊಳ್ಳಬೇಕಿದ್ದು, ಹಂತ ಹಂತವಾಗಿ ಜಿಲ್ಲಾ ಪಂಚಾಯತ್‌ನಲ್ಲಿನ ಆಯವ್ಯಯದಲ್ಲಿ ಅನುದಾನದ ಲಭ್ಯತೆ ಮೇರೆಗೆ ಮುಂಬರುವ ಸಾಲಿನಲ್ಲಿ ಕಟ್ಟಡ ಕಾಮಗಾರಿ ಕೈಗೊಳ್ಳಲು ಕ್ರಮ ಕೈಗೊಳ್ಳಲಾಗುವುದು.

**ಕುಣಿಗಲ್ ವಿಧಾನ ಸಭಾ ಕ್ಷೇತ್ರದಲ್ಲಿ ವಿಶ್ವಬ್ಯಾಂಕ್ ಯೋಜನೆಯಲ್ಲಿನ ಕುಡಿಯುವ ನೀರಿನ ಯೋಜನೆಗಳ ಅನುಷ್ಠಾನ**

434 (668) ಶ್ರೀ ಎನ್. ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಕುಡಿಯುವ ನೀರಿನ ಯೋಜನೆಗಳ ಅನುಷ್ಠಾನದಲ್ಲಿ ತೀವ್ರ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:

2) ಕುಣಿಗಲ್ ವಿಧಾನ ಸಭಾ ಕ್ಷೇತ್ರದ ಇಂತಹ ಯೋಜನೆಗಳ ವಿವರ ಹಾಗೂ ಪ್ರಗತಿಯನ್ನು ನೀಡುವುದು.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು)

1) ಈ ಯೋಜನೆಯ ಮೊದಲನೆಯ ಹಂತದಲ್ಲಿ ವಿಳಂಬವಾಗಿದ್ದರೂ ಒಟ್ಟಾರೆ ಯೋಜನೆಯನ್ನು ನಿಗಧಿಯಾದ ವೇಳೆಗೆ ಪೂರ್ಣಗೊಳಿಸುವ ಸಂಭವವಿದೆ.

2) ವಿಶ್ವಬ್ಯಾಂಕ್ ನೆರವಿನ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ